Reg. No. : .....................................

Name : ..........................................

**FY-206**

**FIRST YEAR HIGHER SECONDARY EXAMINATION, SEPTEMBER 2021**

Part – II

**KANNADA**

Maximum : 80 Scores

Time : **2½** Hours

Cool-off time : **20** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **20** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಒಟ್ಟು **45** ಪ್ರಶ್ನೆಗಳನ್ನು ಕೊಡಲಾಗಿದೆ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. 'ಕಡಲ ಒಡಲು' ಪಾಠಭಾಗವು ಯಾವ ಪ್ರಕಾರಕ್ಕೆ ಸೇರುತ್ತದೆ ?

   (ಪ್ರಬಂಧ, ಕಥೆ, ಪ್ರವಾಸ ಕಥನ, ವಿಮರ್ಶೆ)

2. 'ಜಮೀಲ' – ಈ ಕಥಾಪಾತ್ರ ಬರುವ ಪಾಠ ಯಾವುದು ?

   (ಹುಗ್ಗಿ, ಒಸರು, ವಟವೃಕ್ಷಮೇ ಸಾಕ್ಷಿ, ಮೂಢನಂಬಿಕೆಗಳ ಬೀಡಿನಲ್ಲಿ)

3. "ಅಮ್ಮಾ, ಈ ಹೊತ್ತು ಉಣ್ಣಾಕ ಏನ್ ಮಾಡ್ತಿ ?" – ಈ ಮಾತನ್ನು ಹೇಳಿದವರು ಯಾರು ?

   (ಕೊಟ್ರ, ತಿಮ್ಮಿ, ಚಂದ್ರ, ಬಸವ)

4. 'ನಿನ್ನಯ ವೀರರೈವರ ನೋಯಿಸೆನು' ಪಾಠಭಾಗವನ್ನು ಬರೆದ ಕವಿ ?

   (ಕುಮಾರವ್ಯಾಸ, ಜನ್ನ, ಬಸವಣ್ಣ, ದುರ್ಗಸಿಂಹ)

**5 ರಿಂದ 14 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(5 × 1 = 5)**

5. ಶುಕ – ಈ ಪದದ ಅರ್ಥವನ್ನು ಬರೆಯಿರಿ.

6. ಪ್ರತಿಧ್ವನಿ ಪದಕ್ಕೆ ಒಂದು ಉದಾಹರಣೆಯನ್ನು ನೀಡಿರಿ.

7. ಸಕ್ಕರೆಯಾಗು – ಈ ಪದವನ್ನು ವಿಂಗಡಿಸಿ ಬರೆಯಿರಿ.

8. ವಿಜ್ಞಾನ – ಈ ಪದದ ಭಾವನಾಮ ರೂಪವನ್ನು ಹೆಸರಿಸಿರಿ.

9. ಸ್ವರ್ಗ – ಈ ಪದದ ತದ್ಭವ ರೂಪವನ್ನು ನೀಡಿರಿ.

10. ಸಮರ್ಥ – ಈ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.

11. 'ಅವನಿ' – ಇದರ ಎರಡು ಪರ್ಯಾಯ ಪದಗಳನ್ನು ಹೆಸರಿಸಿರಿ.

12. ರಮೇಶನು ಮೇಜಿನ ಮೇಲೆ ಕುಳಿತನು – ಈ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದವನ್ನು ಗುರುತಿಸಿ ಬರೆಯಿರಿ.

13. ಎಲ್ಲಾ ವಿಷಯಗಳಲ್ಲೂ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಹರೀಶನು ಬುದ್ದಿವಂತ ವಿದ್ಯಾರ್ಥಿಯಾಗಿದ್ದನು – ಈ ವಾಕ್ಯದಲ್ಲಿ ಬಂದಿರುವ ತದ್ಧಿತ ಪ್ರತ್ಯಯವನ್ನು ಗುರುತಿಸಿರಿ.

14. ನುರಿತ ಕಳ್ಳರಿಬ್ಬರು ಪೊಲೀಸರ ಕಣ್ಣಿಗೆ ಮಣ್ಣೆರಚಿ ಪರಾರಿಯಾದರು.
ಅಡಿಗೆರೆ ಎಳೆದ ಪದಗಳನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ತಯಾರಿಸಿರಿ.

**15 ರಿಂದ 20 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.** **(3 × 3 = 9)**

15. ಜಲ ಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

16. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಮೂರು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.
ಮರದ ಪೊಟರೆಯೊಳಗೆ ವಾಸವಾಗಿದ್ದ ಇಲಿಯೊಂದು ಬೇಕೆನಿಸಿದಾಗಲೆಲ್ಲ ಮರದ ಕಾಂಡವನ್ನು ಕೊರೆದು ತಿಂದು ಹಸಿವನ್ನು ನೀಗಿಸಿಕೊಳ್ಳುತ್ತಿತ್ತು .

17. ಕೆಳಗೆ ನೀಡಲಾದ ವಾಕ್ಯವನ್ನು ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯಿರಿ.

"ಸಣ್ಣ ಹುಡ್ಗ ಮಾಡಿದಂಗ ಮಾಡ್ತಿಯಲ್ಲಾ ನೀನು, ಅಮ್ಯಾಕ ಉಣ್ಣುವಂತೆ, ಮೊದ್ಲು ಈ ಗುಂಡಾಲು ಒಯ್ದು ಗೌಡ್ರೀಗೆ ಕೊಟ್ಬಾ ಹೋಗು."

18. 'ಗಿಣಿಯೋದು ಪುಸ್ತಕಜ್ಞಾನ ನಿನ್ನನುಭವವೆ ನಿನಗೆ ಧರುಮದ ದೀಪ' – ಮಂಕುತಿಮ್ಮನ ಕಗ್ಗದಲ್ಲಿ ಬಂದಿರುವ ಈ ಮಾತಿನ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

19. 'ಸ್ಕೂಬಾ ಡೈವಿಂಗ್' ಎಂದರೇನು ? ಕಡಲ ಒಡಲು ಪಾಠಭಾಗದ ಹಿನ್ನೆಲೆಯಲ್ಲಿ ಲಘು ಟಿಪ್ಪಣಿ ಬರೆಯಿರಿ.

20. 'ಅಪ್ರತಿಮ ಪ್ರತಿನಾಯಕ' ನಾಗಿ ರಂಗಸ್ಥಳದಲ್ಲಿ ಮೆರೆದ ಶೇಣಿಯವರು ನಿರ್ವಹಿಸಿದ ವಿಭಿನ್ನ ಪಾತ್ರಗಳನ್ನು ಹೆಸರಿಸಿರಿ.

**21 ರಿಂದ 29 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಉತ್ತರಿಸಿರಿ.** **(4 × 4 = 16)**

21. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಡಿ.ವಿ.ಜಿ. | ಸುನಾಮಿಯ ಹಾಡು |
| ಕುವೆಂಪು | ಕಡಲ ಒಡಲು |
| ಡಾ. ಎಚ್.ಎಲ್. ಪುಷ್ಪ | ಮಂಕುತಿಮ್ಮನ ಕಗ್ಗ |
| ರಹಮತ್ ತರೀಕೆರೆ | ಸುಗ್ಗಿ ಬರುತಿದೆ |

22. ಅಂಡಮಾನಿನ ರೆಡ್ ಸ್ಕಿನ್ ದ್ವೀಪ ಪ್ರದೇಶದಲ್ಲಿ ಕಂಡು ಬರುವ ಸೀ ಅನಿಮೋನ್ ಹವಳ ಮೀನುಗಳ ವಿಶೇಷತೆಯ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

23. ಕೆಳಗೆ ನೀಡಲಾದ ಪದ್ಯಸಾಲುಗಳ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗಸೊಗವ ತರುತಿದೆ
ಕಣಿವೆಯಿಳಿದು ತೆಮರನೇರಿ,
ತರುಗಳಲ್ಲಿ ತಳಿರ ಹೇರಿ,
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡಿತಿರುವುದು
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು.

24. ನಿಮ್ಮ ಗ್ರಾಮದ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಆರಂಭಿಸಿರುವ 'ಜಲನಿಧಿ ಯೋಜನೆ'ಯ ಕಾಮಗಾರಿಯು ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿದೆ. ಅದನ್ನು ಅತಿ ಶೀಘ್ರವಾಗಿ ಪೂರ್ತಿಗೊಳಿಸುವಂತೆ ಕೋರಿ ನಿಮ್ಮ ಗ್ರಾಮ ಪಂಚಾಯತಿನ ಅಧ್ಯಕ್ಷರಿಗೆ ಸಮರ್ಪಿಸಲು ಅಗತ್ಯವಾದ ಮನವಿಪತ್ರವನ್ನು ತಯಾರಿಸಿರಿ.

25. ಕೆಳಗೆ ಕೊಡಲಾದ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ.

ಹಾಲುಂಡ ತವರೀಗಿ ಏನೆಂದು ಹಾಡಲೆ

ಹೊಳೆದಂಡಿಲಿರುವ ಕರಕೀಯ – ಕುಡಿಯಂಗ

ಹಬ್ಬಲೆ ಅವರ ರಸಬಳ್ಳಿ

26. ತನ್ನ ಜನ್ಮ ವೃತ್ತಾಂತವನ್ನು ಅರಿತಾಗ ಕರ್ಣನಲ್ಲಿ ಉಂಟಾದ ಮಾನಸಿಕ ಸಂಘರ್ಷವನ್ನು ಕುರಿತು ಕಿರು ಟಿಪ್ಪಣಿಯನ್ನು ಬರೆಯಿರಿ.

27. 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಕಾವ್ಯಭಾಗದಲ್ಲಿ ಬಂದಿರುವ ಅಭಯರುಚಿ ಮತ್ತು ಅಭಯಮತಿಯರು ಪರಸ್ಪರ ಸಂತೈಸಿಕೊಳ್ಳುವ ಮಾತುಕತೆಯನ್ನು ಸಂಗ್ರಹಿಸಿ ಬರೆಯಿರಿ.

28. ಕೆಳಗೆ ನೀಡಲಾದ ಕಾವ್ಯಭಾಗವನ್ನು ಹೊಸಗನ್ನಡ ಗದ್ಯರೂಪಕ್ಕೆ ಪರಿವರ್ತಿಸಿ ಬರೆಯಿರಿ.

ನಿನಗೆ ಹಸ್ತಿನಪುರದ ರಾಜ್ಯದ

ಘನತೆಯನು ಮಾಡುವೆನು ಪಾಂಡವ

ಜನಪ ಕೌರವ ಜನಪರೋಲೈಸುವರು ಗದ್ದುಗೆಯ

ನಿನಗೆ ಕಿಂಕರವೆರಡು ಸಂತತಿ

ಯೆನಿಸಲೊಲ್ಲದೆ ನೀನು ದುರಿಯೋ

ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

29. ಕೆಳಗೆ ನೀಡಲಾದ ಇಂಗ್ಲಿಷ್ ಗದ್ಯ ಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ.

Jog falls is a largest water falls in India. It was one of the major attractions for Karnataka Tourism. Jog falls is located in Shimoga District of Karnataka State. The falls is also known as Gerusoppa falls.

Falls – ಜಲಪಾತ ; attractions – ಆಕರ್ಷಣೆ ; Gerusoppa falls – ಗೇರುಸೊಪ್ಪ ಜಲಪಾತ

**30** ರಿಂದ **41** ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ಅರ್ಧ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(6 × 5 = 30)**

30. ಡಾ. ಎಚ್.ಎಲ್. ಪುಷ್ಪ ಅವರ 'ಸುನಾಮಿಯ ಹಾಡು' ಕವನದ ಸಾಲುಗಳನ್ನು ಕೆಳಗೆ ನೀಡಲಾಗಿದೆ. ಸಾಲುಗಳ ಹಿಂದೆ ಅಡಗಿರುವ ಸುನಾಮಿಯ ತೀವ್ರತೆಯನ್ನು ಗುರುತಿಸಿಕೊಂಡು ಸ್ವಾರಸ್ಯವನ್ನು ಬರೆಯಿರಿ.

ಎಲ್ಲೋ ದೂರದಲ್ಲಿ ಭೂಮಿ ಕಂಪಿಸಿದರೆ

ಕಡಲು ಎಲ್ಲೆ ಮೀರಿ ಮೊರೆದರೆ

ಇಟ್ಟಿಗೆ ಮೇಲೆ ಇಟ್ಟಿಗೆ ಜೋಡಿಸಿದ

ಗುಡಿ, ಚರ್ಚು, ಮಸೀದಿಗಳೆಲ್ಲಾ

ಹಾರಿ ಹೋಗುತ್ತವೆ ಸಾಕ್ಷಿಯಿಲ್ಲದಂತೆ

ಕುಸಿದು ಹೋದ ಸಮಾಧಿಯ ಸುತ್ತ

ನಾಳೆ ಉತ್ಖನನ ನಡೆಸುವವರು ಪಿಕಾಸಿ ಹಿಡಿದು

ಎಲ್ಲಿಂದ ಅಗೆಯಬೇಕೆಂದು ನಕಾಶೆ ಹುಡುಕುತ್ತಾರೆ

31. ಸುಗ್ಗಿಯನ್ನು ಸ್ವಾಗತಿಸಲು ಪ್ರಕೃತಿ ಸಿದ್ಧಗೊಂಡ ಬಗೆಯನ್ನು ಕವಿ ಹೇಗೆ ವರ್ಣಿಸಿರುವನು ? ವಿವರಿಸಿರಿ.

32. ನಿಮ್ಮ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳವೊಂದರ ಕುರಿತು ಮಾಹಿತಿ ಟಿಪ್ಪಣಿಯನ್ನು ತಯಾರಿಸಿರಿ.

33. ಅಜ್ಜನು ಮೊಮ್ಮಕ್ಕಳಿಗೆ ಹೇಳಿದ ಬ್ಲೆನ್ ಹೀಮ್ ಕದನದ ಕಥೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

34. ಪ್ರಳಯದ ಕುರಿತಾದ ನಂಬಿಕೆಯೊಂದರ ಹಾಸ್ಯಾತ್ಮಕ ನಿರೂಪಣೆ ಮೂಢನಂಬಿಕೆಗಳ ಬೀಡಿನಲ್ಲಿ ಪಾಠಭಾಗದಲ್ಲಿದೆ. ಅದರ ಸ್ವಾರಸ್ಯವನ್ನು ಬರೆಯಿರಿ.

35. "ಧರ್ಮೋ ಜಯತಿ ನಾಧರ್ಮ ಇತ್ಯಮೋಘಕೃತಂ (ಧರ್ಮವು ಗೆಲ್ಲುವುದೇ ವಿನಃ ಅಧರ್ಮವಲ್ಲ)" ಎಂಬ ಮಾತನ್ನು ಸತ್ಯವಾಗಿಸಿದ ಧರ್ಮಬುದ್ಧಿಯ ಪಾತ್ರಚಿತ್ರಣವನ್ನು ಮಾಡಿರಿ.

36. 'ಕೊರೋನಾ ರೋಗ' ಬರದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಮತ್ತು ಜಾಗೃತಿಯ ಕುರಿತು ಮಾಹಿತಿಯನ್ನು ಒದಗಿಸುವ ಕರಪತ್ರವೊಂದನ್ನು ಸಿದ್ಧಪಡಿಸಿರಿ.

37. ಕೆಳಗೆ ನೀಡಲಾದ ಕಳ್ಳಿಗೆ ಮಹಾಬಲ ಭಂಡಾರಿಯವರ ಜೀವನಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

    ಕಾಸರಗೋಡು ತಾಲೂಕು ಮೀಂಜ ಗ್ರಾಮದ ಕಳ್ಳಿಗೆ ಕುಟುಂಬದಲ್ಲಿ 1928 ರಲ್ಲಿ ಮಹಾಬಲ ಭಂಡಾರಿಗಳ ಜನನವಾಯಿತು. ಅವರ ತಂದೆ ತಲೇಕಳ ಮನೆತನದ ಸಂಕಪ್ಪ ಭಂಡಾರಿಗಳು. ಅವರ ತಾಯಿ ಕಳ್ಳಿಗೆ ಬೀಡಿನ ಶ್ರೀಮತಿ ಶಂಕರಿ ಯಾನೆ ಸಂಕಾಜು. ಮಹಾಬಲ ಭಂಡಾರಿಗಳಿಗೆ ಮೂರು ಜನ ಒಡಹುಟ್ಟುಗಳು. ಅಣ್ಣ ಸುಬ್ಬಣ್ಣ, ಅಕ್ಕ ದೇವಕಿ ಮತ್ತು ತಂಗಿ ಶಾಂಭವಿ. ಅವರ ಪ್ರಾಥಮಿಕ ವಿದ್ಯಾಭ್ಯಾಸವು ಪೈವಳಿಕೆ ಹಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು. ಬಳಿಕ ಪ್ರೌಢಶಾಲಾ ಶಿಕ್ಷಣವನ್ನು ಪಡೆಯುವುದಕ್ಕಾಗಿ ಅವರು ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಸೇರ್ಪಡೆಗೊಂಡರು.

38. ನೀರಿಗಾಗಿ ಸುರಂಗ ತೋಡುವ ಖಾದ್ರಿಕಾಕನ ಧೀರೋದಾತ್ತ ನಿಲುವು "ಒಸರು" ಪಾಠದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

39. ಕೆಳಗೆ ಕೊಟ್ಟಿರುವ ಪದ್ಯಸಾಲುಗಳ ಭಾವಾರ್ಥವನ್ನು ಬರೆಯಿರಿ.

    ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು
    ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ
    ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
    ಜಸವು ಜನಜೀವನಕೆ ಮಂಕುತಿಮ್ಮ

40. “ನಿನ್ನಯ ವೀರರೈವರ ನೋಯಿಸೆನು” ಕಾವ್ಯಭಾಗದಲ್ಲಿ ಬಂದಿರುವ ಕೃಷ್ಣನ ಭೇದೋಪಾಯ ತಂತ್ರದ ಕುರಿತು ಲೇಖನವೊಂದನ್ನು ತಯಾರಿಸಿರಿ.

41. ‘ಬಾರ್ಲೆ ಬಸ್ಯ. ನಿಮ್ಮಪ್ಪ ಹೇಳ್ದಂಗೆ ಬಂದ್ಬಿಡು’ ಎಂದ ಗೌಡರ ಮಾತಿಗೆ ಬಸವನ ಪ್ರತಿಕ್ರಿಯೆ ಏನಾಗಿತ್ತು ? ಹುಗ್ಗಿ ಕಥೆಯ ಆಧಾರದಲ್ಲಿ ವಿವರಿಸಿರಿ.

**42** ರಿಂದ **45** ರ ವರೆಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(2 × 8 = 16)**

42. ಮನುಷ್ಯ ಎಷ್ಟೇ ಬಲಿಷ್ಟನಾದರೂ ನಿಸರ್ಗದೆದುರು ನಿಲ್ಲಲಾರ ಎಂಬುದನ್ನು ಸುನಾಮಿಯ ಹಾಡು ಕವನದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

43. ಇಂದು ನಾವು ಎದುರಿಸುತ್ತಿರುವ ನೀರಿನ ಸಮಸ್ಯೆಗೆ ಕೊಳವೆ ಬಾವಿಗಳನ್ನು ತೋಡುವುದೊಂದೇ ಪರಿಹಾರವಲ್ಲ. ಅದಕ್ಕೆ ಪರಿಸರ ಸ್ನೇಹಿಯಾದ ಹಲವು ಪರ್ಯಾಯ ಮಾರ್ಗಗಳಿವೆ. ಈ ಕುರಿತು ಜನಜಾಗೃತಿ ಮೂಡಿಸಲು ‘ಪರಿಸರ ಸ್ನೇಹಿ ಪಾರಂಪರಿಕ ಜಲಮೂಲಗಳು ಮತ್ತು ಅವುಗಳ ಸಂರಕ್ಷಣೆ’ ಎಂಬ ಶೀರ್ಷಿಕೆಯಲ್ಲಿ ಪ್ರಬಂಧವೊಂದನ್ನು ತಯಾರಿಸಿರಿ.

44. ಹಸಿವು, ಬಡತನ, ಶೋಷಣೆ ಮೊದಲಾದ ಸಮಸ್ಯೆಗಳು ಕುಂ. ವೀರಭದ್ರಪ್ಪನವರ ‘ಹುಗ್ಗಿ’ ಕಥೆಯಲ್ಲಿ ಪ್ರತಿಫಲನಗೊಂಡ ಬಗೆಯನ್ನು ಕುರಿತು ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ.

45. ರಾಜ ಮತ್ತು ಬಕರೊಳಗೆ ನಡೆದ ಒಪ್ಪಂದವೇನಾಗಿತ್ತು ? ವಿವರಿಸಿರಿ.

---